# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ

ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)ಪಿ.ಆರ್/ 372 /2020-21. ದಿನಾಂಕ : 10-02-2021

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ: ಬಿ12(5)ಪಿ.ಆರ್/35/2020-21, ದಿನಾಂಕ:29-09-2020 ಹಾಗೂ ನೋಡಲ್ ಅಧಿಕಾರಿ ರವರು ದಿನಾಂಕ: 08-02-2021 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ: 143 ವಾರ್ಡ್ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿ, ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀ. ವೆಂಕಟೇಶ್ ಆರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು 143 | 9480684415 |
| 3 | ಕುಮಾರ್ | ಬಿಬಿಎಂಪಿ ಅರಣ್ಯ ಇಲಾಖೆ | 8971335946 |
| 4 | ಶ್ರೀ.ಪಿ.ನರಸಿಂಹ | ಕಿರಿಯ ಆರೋಗ್ಯ ಪರಿವೀಕ್ಷಕರು | 8660658637 |
| 5 | Shidlingappa Mali.JCO | Marshal Supervisor | 6361477400 |
| 6 | Subramni.B.C. | Marshal (BBMP) | 9066997278 |
| 7 | ಶ್ರೀ.ಎಸ್.ಹೇಮಂತ್ ಕುಮಾರ್ | ಸಹಾಯಕ ಅಭಿಯಂತರರು ಬೆಸ್ಕಾಂ | 9449870535 |
| 8 | Anantha raju | AEE | 9448543605 |
| 9 | G.Murthy | J.E. Electrical south | 9449153115 |
| 10 | S.M. Udaya kumar | AEE Tec (RI) | 9916883730 |
| 11 | ಶ್ರೀಹನಮಂತ ವನಜೋಳ್ ರವರ ಪರವಾಗಿ (ಕೆ.ಕೆಂಪಣ್ಣ) | ಜಲ ಪರಿವೀಕ್ಷಕರು (BWSSB) | 9845444087 |
| 12 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 13 | ಶ್ರೀ.ರಾಮ ಐಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 14 | ಎಂ.ಎಂ.ವಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 15 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |

Scanned by CamScanner

ದಿನಾಂಕ:08-02-2021 ರಂದು ನಡೆದ ವಾರ್ಡ್ -143ರ ಸಮಿತಿ ಸಭೆಯ ನಡಾವಳಿಗಳು:

ಮಾನ್ಯ ನೋಡಲ್ ಅಧಿಕಾರಿಗಳ ಅನುಮತಿಯೊಂದಿಗೆ ವಾರ್ಡ್ ಸಮಿತಿಯ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ, ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಅಧ್ಯಕ್ಷರು ಮತ್ತು ವಿವಿಧ ಇಲಾಖೆಯ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಮೊದಲು ಬಸನವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ರಾಜು ರವರು ಮಾತನಾಡಿ,

1. ಎಂ.ಎನ್.ಕೃಷ್ಣರಾವ್ ರಸ್ತೆಯಲ್ಲಿ ಡಾಂಬರೀಕರಣ ಕಾಮಗಾರಿಯನ್ನು ರಾತ್ರಿ ವೇಳೆಯಲ್ಲಿ ಮಾಡಿದ್ದು, ಅದು ಸರಿಯಾಗಿ ಆಗಿಲ್ಲದ ಕಾರಣ ಅದನ್ನು ಸರಿಪಡಿಸುವಂತೆ ಕೋರಿರುವುದು.
2. ಕೆ.ಆರ್. ರಸ್ತೆಯಲ್ಲಿ ಮೀಡಿಯನ್ ಜಾಗದಲ್ಲಿ ಗಿಡಗಳನ್ನು ನೆಟ್ಟಿದ್ದು, ಅವುಗಳನ್ನು ತೆರವುಗೊಳಿಸಲು ಕೋರಿರುವುದು.
3. ಗೋವಿಂದಪ್ಪ ರಸ್ತೆಯಲ್ಲಿ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ಕೋರಿರುವುದು.
4. ಲಾಲ್‌ಬಾಗ್ ವೆಸ್ಟ್‌ಗೇಟ್ ಸರ್ಕಲ್‌ನಲ್ಲಿ ಕೃಂಬಿಗಲ್ ರಸ್ತೆಯಿಂದ ಆರ್.ವಿ.ರಸ್ತೆಗೆ FREE LEFT TURN ಇರುವುದನ್ನು ರದ್ದುಗೊಳಿಸಲು ಕೋರಿರುವುದು.
5. ಲಾಲ್‌ಬಾಗ್ ವೆಸ್ಟ್‌ಗೇಟ್ ಸರ್ಕಲ್‌ನಲ್ಲಿ ಸಾರ್ವಜನಿಕರು ಎಂ.ಎನ್.ಕೃಷ್ಣರಾವ್ ರಸ್ತೆ ದಾಟಲು Pedastrain crossing ಮತ್ತು Zebra crossing ಅಳವಡಿಸಲು ಕೋರಿರುವುದು.
6. ಪ್ರೊ!! ಬಿ.ಎಸ್.ಮಾಧವರಾವ್ ಸರ್ಕಲ್ಲಿನ ಕನಕಪುರ ರಸ್ತೆ ಮತ್ತು ಬಿ.ಪಿ.ವಾಡಿಯ ರಸ್ತೆ ಜಂಕ್ಷನ್‌ನಲ್ಲಿ Traffic Signal ಅಳವಡಿಸಲು ಕೋರಿರುವುದು.
7. ಮಾಧವರಾವ್ ಸರ್ಕಲ್ ಬಾಂಬೆ ಹೌಸ್ ಮುಂಭಾಗ ಬೀದಿ ದೀಪಗಳನ್ನು ಅಳವಡಿಸಲು ಕೋರಿರುವುದು..

ಮೇಲೆ ತಿಳಿಸಲಾದ ಕ್ರಮ ಸಂಖ್ಯೆ (1) ರಿಂದ (7) ರವರೆಗಿನ ವಿಷಯಗಳನ್ನು ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ. ರಾಜು ರವರು ಕೋರಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಕ್ರಮ ಸಂಖ್ಯೆ (1) ಮತ್ತು (2) ರ ಬಗ್ಗೆ ಸೂಕ್ತ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ, BBMP Road Infrastructure ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ. ಅನಂತರಾಜು ರವರಿಗೆ ತಿಳಿಸಲಾಯಿತು. ಕ್ರಮ ಸಂಖ್ಯೆ: 3 ರ ಬಗ್ಗೆ ಸೂಕ್ತ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ BBMP Forest ವಿಭಾಗದ ಅಧಿಕಾರಿಗಳಿಗೆ ತಿಳಿಸಲಾಯಿತು. ಕ್ರಮ ಸಂಖ್ಯೆ: 4 ಮತ್ತು 6 ಗಳಿಗೆ ಸಂಬಂಧಿಸಿದಂತೆ ಸಂಚಾರಿ ಪೊಲೀಸ್ ರವರಿಗೆ ಪತ್ರ ಬರೆದು ಕೋರಲಾಗುವುದೆಂದು ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು. ಕ್ರಮ ಸಂಖ್ಯೆ: 5 ಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ ಬಿ.ಬಿ.ಎಂ.ಪಿ. TEC ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ. ಬಿ.ಎಂ.ಉದಯಕುಮಾರ್ ರವರಿಗೆ ತಿಳಿಸಲಾಯಿತು. ಕ್ರಮ ಸಂಖ್ಯೆ:7 ಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ BBMP Electrical ವಿಭಾಗದ ಅಭಿಯಂತರರಾದ ಶ್ರೀ.ಜಿ. ಮೂರ್ತಿ ರವರಿಗೆ ತಿಳಿಸಲಾಯಿತು.

Scanned by CamScanner

ನಂತರ ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ಪಿ.ವಿ.ಜಯಕುಮಾರ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿನ ಕೆಲವು ರಸ್ತೆಗಳಲ್ಲಿ ಅಂದರೆ ಈಸ್ಟ್ ಸರ್ಕಲ್ ರಸ್ತೆ, ರಾಮಯ್ಯಂಗಾರ್ ರಸ್ತೆ ಹಾಗೂ ಬುರುಗಲ್ ಮಠ ರಸ್ತೆಗಳಲ್ಲಿ ಸುಮಾರು ವರ್ಷಗಳಿಂದ ನಿಂತಿರುವ ಗುಜರಿ ವಾಹನ (Scrap Vehicles)ಗಳನ್ನು ತೆರವುಗೊಳಿಸುವಂತೆ ಸಭೆಯ ಗಮನಕ್ಕೆ ತಂದರು. ಇವುಗಳಿಂದಾಗಿ ರಸ್ತೆಯಲ್ಲಿ ಜಾಗವಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದನ್ನು ಪ್ರಸ್ತಾಪಿಸಿ ಅವುಗಳನ್ನು ಕೂಡಲೇ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಸದರಿ ಗುಜರಿ ವಾಹನಗಳನ್ನು ತೆರವುಗೊಳಿಸಲು ಸಂಚಾರಿ ಪೊಲೀಸ್ ರವರಿಗೆ ಪತ್ರ ಬರೆದು ಕೋರಲಾಗುವುದೆಂದು ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ನಂತರ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

10/2/2021

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –143 ವಿ. ವಿ.ಪುರಂ

10/02/2021

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 143 ಹಾಗೂ
ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ)

Scanned by CamScanner